ಹಂಪಿಯ ಸ್ನೇಹಿತರು, ಶ್ರೀ ಶಾರದಾ ಮಹಿಳಾ ಕಲ್ಯಾಣ ಸಂಘ, ಹಂಪಿ ಶ್ರೀ ಮಹರ್ಷಿ ವಾಲ್ಮೀಕಿ ಸಂಘ, ಹಂಪಿ ಶ್ರೀ ಹಂಪಿ ವಿಜಯನಗರ ಮಾರ್ಗದರ್ಶಿ ಸಂಘ, ಹಂಪಿ ಶ್ರೀ ವಿಜಯನಗರ ಆಟೋ ಚಾಲಕರ ಸಂಘ, ಹಂಪಿ, ನಾಗರಿಕರ ಹಕ್ಕುಗಳು ಹಾಗೂ ರಕ್ಷಣಾ ವೇದಿಕೆ, ಹಂಪಿ ಹಾಗೂ ಈಕ್ವೇಷನ್ಸ್, ಬೆಂಗಳೂರು

17.8.2011

*ಹಂಪಿ ಮಾರುಕಟ್ಟೆಯಲ್ಲಿ ನಡೆದ ಅಮಾನವೀಯ ಹಾಗೂ ಅಕ್ರಮ ಸ್ಥಳಾಂತರಣವನ್ನು ನಾವು ಖಂಡಿಸುತ್ತೇವೆ; ಹಂಪಿಯು ಕೇವಲ ಅಮೋಘವಾದ ಭೂದೃಶ್ಯದಲ್ಲಿ ಚದುರಿದ ಪಳೆಯುಳಿಕೆಗಳ ಸಂಕಲನ ಮಾತ್ರವಲ್ಲ. ಅದು ಚಾರಿತ್ರಿಕ ಹಾಗೂ ಪುರಾತನ ನಗರ, ವಿಜಯನಗರದ ಭಾಗವಾಗಿದ್ದು, ಇಂದಿಗೂ ಜೀವಂತವಾಗಿ ಉಳಿದ ತಾಣವಾಗಿದೆ. ಇಲ್ಲಿಗೆ ಭೇಟಿ ಮಾಡುವವರು, ಪ್ರವಾಸಿಗರು ಚೇತನದಿಂದ ತುಂಬಿದ ಮಾರುಕಟ್ಟೆಯ ಹುರುಪು ಹಾಗೂ ಬಣ್ಣದ ಅನುಭವವನ್ನು ಪಡೆಯಬಹುದು. ಹಂಪಿ ಮಾರುಕಟ್ಟೆಯ ಅಕ್ರಮ ಕೆಡಹುವಿಕೆಯಿಂದ, ಇಂದು ಹಂಪಿ ಮಾರುಕಟ್ಟೆಯು ಬಿಕ್ಕಟ್ಟನ್ನು ಎದುರಿಸುತ್ತಿದೆ. ಕೆಡಹುವಿಕೆಯ ಕೆಲವೇ ಗಂಟೆಗಳಿಗೆ ಮುನ್ನ ಉಚ್ಚಾಟನೆಯ ನೋಟೀಸ್‌ನ್ನು ಜನರಿಗೆ ನೀಡಿದ ಕಾರಣ, ಅದಕ್ಕೆ ಉತ್ತರಿಸಿ ಹಾಗೂ ಪ್ರತಿಕ್ರಿಯಿಸಲು ಕಾಲಾವಕಾಶ ಹಾಗೂ ಸಮಯ ದೊರೆಯಲಿಲ್ಲ. ಉಚ್ಚಾಟನೆಗೆ ಮುನ್ನ, ಬದಲಿ ವಸತಿ ಸೌಕರ್ಯವಾಗಲಿ ಅಥವಾ ವ್ಯಾಪಾರವನ್ನು ನಡೆಸುವ ಸ್ಪಷ್ಟ ಮಾರ್ಗಸೂಚಿಗಳನ್ನಾಗಲಿ ನೀಡಲಾಗಿಲ್ಲ. ಈ ಉಚ್ಚಾಟನೆಯ ಪ್ರಭಾವದಿಂದ, ಅನೇಕ ಕುಟುಂಬಗಳು, ಅದರಲ್ಲೂ ಸಣ್ಣ ಮಕ್ಕಳು ಹಾಗೂ ಮುದಕರು ಇರುವ ಕುಟುಂಬಗಳು ಬೀದಿಗೆ ಬಂದಿದ್ದಾರೆ, ವಾಸಿಸಲು ಅವರಿಗೆ ಸ್ಥಳವಿಲ್ಲ ಹಾಗೂ ಇದು ಅವರ ಜೀವನೋಪಾಯಗಳ ಮೇಲೂ ಪ್ರಭಾವ ಬೀರಿದೆ. ಈ ಹೇಳಿಕೆಗೆ ಬೆಂಬಲವಾಗಿ ದಯವಿಟ್ಟು ಈ ವಿಳಾಸಕ್ಕೆ ಈ-ಮೇಲ್ ಕಳುಹಿಸಿ:* campaigns@equitabletourism.org.

1. ಶ್ರೀ.ವಿ.ಕಿಶೋರ್ ಚಂದ್ರ ದೇವ್,
   ಪಂಚಾಯತ್ ರಾಜ್ ಮಂತ್ರಿ,
   ಭಾರತ ಸರ್ಕಾರ,
   ಕೃಷಿ ಭವನ,
   ಡಾ॥ ರಾಜೇಂದ್ರ ಪ್ರಸಾದ್ ರಸ್ತೆ,
   ನವ ದೆಹಲಿ – 110 001

2. ಕುಮಾರಿ ಸೆಲ್ಜ,
   ಸಂಸ್ಕೃತಿ ಮಂತ್ರಿಗಳು,
   ಭಾರತ ಸರ್ಕಾರ,
   ಕೊಠಡಿ ಸಂ.501, 'ಸಿ' ವಿಭಾಗ,
   ಶಾಸ್ತ್ರಿ ಭವನ,
   ನವದೆಹಲಿ – 110 115

3. ಶ್ರೀ. ಸುಬೋಧ್ ಕಾಂತ್ ಸಹಾಯ್,
   ಪ್ರವಾಸೋದ್ಯಮ ಮಂತ್ರಿಗಳು,

ಭಾರತ ಸರ್ಕಾರ,
ಸಂಚಾರಿ ಭವನ,
1, ಸಂಸತ್ ರಸ್ತೆ,
ನವದೆಹಲಿ – 110 001

4. ಶ್ರೀ. ಜಯರಾಂ ರಮೇಶ್,
   ಗ್ರಾಮಾಭಿವೃದ್ಧಿ ಮಂತ್ರಾಲಯ,
   ಕೊಠಡಿ ಸಂ.48, ಕೃಷಿ ಭವನ,
   ಡಾ॥ ರಾಜೇಂದ್ರ ಪ್ರಸಾದ್ ರಸ್ತೆ,
   ನವದೆಹಲಿ – 110 001

5. ಶ್ರೀ. ಸದಾನಂದ ಗೌಡ,
   ಮುಖ್ಯಮಂತ್ರಿಗಳು ಹಾಗೂ ಕನ್ನಡ ಹಾಗೂ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಮಂತ್ರಿಗಳು,
   ಕರ್ನಾಟಕ ಸರ್ಕಾರ,
   ಕೊಠಡಿ ಸಂ.323,
   3ನೆಯ ಮಹಡಿ, ವಿಧಾನ ಸೌಧ,
   ಬೆಂಗಳೂರು – 560 001.

**ವಿಷಯ: ಹಂಪಿ ಮಾರುಕಟ್ಟೆಯಲ್ಲಿ ನಡೆದ ಅಮಾನವೀಯ ಹಾಗೂ ಅಕ್ರಮ ಉಚ್ಛಾಟನೆ ಹಾಗೂ ಕೆಡಹುವಿಕೆಯನ್ನು ನಾವು ಖಂಡಿಸುತ್ತೇವೆ**

ಹಂಪಿಯು ಕೇವಲ ಅಮೋಘವಾದ ಭೂದೃಶ್ಯದಲ್ಲಿ ಚದುರಿದ ಪಳೆಯುಳಿಕೆಗಳ ಸಂಕಲನ ಮಾತ್ರವಲ್ಲ. ಅದು ಚಾರಿತ್ರಿಕ ಹಾಗೂ ಪುರಾತನ ನಗರ, ವಿಜಯನಗರದ ಭಾಗವಾಗಿದ್ದು, ಇಂದಿಗೂ ಜೀವಂತವಾಗಿ ಉಳಿದ ತಾಣವಾಗಿದೆ. ಇಲ್ಲಿಗೆ ಭೇಟಿ ಮಾಡುವವರು (ಭಾರತೀಯರು, ವಿದೇಶೀಯರು, ತೀರ್ಥಯಾತ್ರೆಗೆ ಹೊರಟಿರುವವರು, ಸಂಶೋಧಕರು, ಇತ್ಯಾದಿ) ಚೇತನದಿಂದ ತುಂಬಿದ ಮಾರುಕಟ್ಟೆಯ ಹುರುಪು ಹಾಗೂ ಬಣ್ಣದ ಅನುಭವವನ್ನು ಪಡೆಯಬಹುದು.

ಗ್ರಾಮ ಪಂಚಾಯತಿಯಿಂದ ಆಳಲ್ಪಡುವ ಹಂಪಿಯಲ್ಲಿ 4,000 ಕುಟುಂಬಗಳು ವಾಸವಾಗಿವೆ. 1940ರ ದಶಕದ ಪ್ರಾರಂಭದಲ್ಲಿ ಜನರು ಹಂಪಿಯಲ್ಲಿ ವಾಸಿಸಲು ಪ್ರಾರಂಭಿಸಿದರು. ವಿರೂಪಾಕ್ಷ ದೇವಾಲಯದ ಮುಂದಿರುವ ಬೀದಿಯನ್ನು ಹಂಪಿ ಮಾರುಕಟ್ಟೆ ಅಥವಾ ವಿರೂಪಾಕ್ಷ ಮಾರುಕಟ್ಟೆ ಎಂದು ಕರೆಯಲಾಗುತ್ತದೆ. ಚಾರಿತ್ರಿಕವಾಗಿ, ಅದನ್ನು ರಥ ಬೀದಿ ಎಂದೂ ಕರೆಯಲಾಗುತ್ತಿತ್ತು. ಹಂಪಿ ಮಾರುಕಟ್ಟೆಯ ಹಂಪಿಯ ಅನೇಕ ಸಾಂಸ್ಕೃತಿಕ ತಾಣಗಳಲ್ಲಿ ಒಂದು, ಜೊತೆಗೆ ಗ್ರಾಮದ ಕೇಂದ್ರ ಬಿಂದು ಹಾಗೂ ಒಂದು ಪ್ರಮುಖ ಪ್ರವಾಸಿ ತಾಣ. ಕೆಡಹುವಿಕೆಯ ಮುನ್ನ, ಆಭರಣಗಳು, ಕಸೂತಿ ಮಾಡಿದ ವಸ್ತ್ರಗಳು ಹಾಗೂ ಹಳೆಯ ನಾಣ್ಯಗಳನ್ನು ಹಾಗೂ ಇತರ ಕಲಾತ್ಮಕ ವಸ್ತುಗಳನ್ನು ನೆನಪಿನ ಕುರುಹಾಗಿ ಮಾರುವ ಅನೇಕ ಉತ್ಪನ್ನಗಳ ಸಾಲು ಸಾಲು ಅಂಗಡಿಗಳಿದ್ದವು.

ಹಂಪಿಯ ಮಾರುಕಟ್ಟೆಯ ಅಕ್ರಮ ಕೆಡಹುವಿಕೆಯಿಂದ, ಇಂದು ಹಂಪಿ ಮಾರುಕಟ್ಟೆಯು ಬಿಕ್ಕಟ್ಟನ್ನು ಎದುರಿಸುತ್ತಿದೆ. ಕೆಡಹುವಿಕೆಯ ಕೆಲವೇ ಗಂಟೆಗಳಿಗೆ ಮುನ್ನ ಉಚ್ಚಾಟನೆಯ ನೋಟೀಸ್‌ನ್ನು ಜನರಿಗೆ ನೀಡಿದ ಕಾರಣ, ಅದಕ್ಕೆ ಉತ್ತರಿಸಿ ಹಾಗೂ ಪ್ರತಿಕ್ರಿಯಿಸಲು ಕಾಲಾವಕಾಶ ಹಾಗೂ ಸಮಯ ದೊರೆಯಲಿಲ್ಲ. ಉಚ್ಚಾಟನೆಗೆ ಮುನ್ನ, ಬದಲಿ ವಸತಿ ಸೌಕರ್ಯವಾಗಲಿ ಅಥವಾ ವ್ಯಾಪಾರವನ್ನು ನಡೆಸುವ ಸ್ಪಷ್ಟ ಮಾರ್ಗಸೂಚಿಗಳನ್ನಾಗಲಿ ನೀಡಲಾಗಿಲ್ಲ. ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರ್ಕಾರದ ಅಂಕಿ-ಅಂಶಗಳ ಆಧಾರದ ಮೇಲೆ, ಕಳೆದ ಎರಡು ವರ್ಶಗಳಲ್ಲಿ ಈ ಪ್ರದೇಶಕ್ಕೆ ಬರುವ ಪ್ರವಾಸಿಗರ ಸಂಖ್ಯೆಯು ಮೂರು ಪಟ್ಟು ಹೆಚ್ಚಾಗಿದೆ. 2009ರಲ್ಲಿ ಹಂಪಿ, ಹೊಸಪೇಟೆಗೆ ಬಮ್ದ ಪ್ರವಾಸಿಗರ ಸಂಖ್ಯೆಯು 10 ಲಕ್ಷಕ್ಕಿಂತ ಅಧಿಕವಾಗಿದ್ದು, 2010ರಲ್ಲಿ ಇದು 13 ಲಕ್ಷಕ್ಕಿಂತ ಅಧಿಕಗೊಂಡಿದೆ. ಕಳೆದ 40-50 ವರ್ಷಗಳಿಂದ ಹಂಪಿಯಲ್ಲಿ ವಾಸಿಸುತ್ತಿರುವ 200ಕ್ಕೂ ಹೆಚ್ಚು ಕುಟುಂಬಗಳು ಪ್ರವಾಸೋದ್ಯಮ ಹಾಗೂ ಪ್ರವಾಸೋದ್ಯಮ-ಸಂಬಂಧಿತ ಚಟುವಟಿಕೆಗಳನ್ನು ಸಂಪೂರ್ಣವಾಗಿ ಅವಲಂಬಿಸಿದ್ದಾರೆ.

28 ಜುಲೈ, 2011ರ ಮಧ್ಯಾಹ್ನದಂದು, ಬಳ್ಳಾರಿಯ ಹೆಚ್ಚುವರಿ ಕಮೀಷನರ್‌ರವರು 200ಕ್ಕೂ ಹೆಚ್ಚು ಕುಟುಂಬಗಳಿಗೆ ಮೌಖಿಕ ಎಚ್ಚರಿಕೆಯನ್ನು ನೀಡಿ, ಕೆಡಹುವಿಕೆಯ ಪ್ರಕ್ರಿಯೆಯು ಪ್ರಾರಂಭ ಮಾಡಲು ಅನುವು ಮಾಡಿಕೊಡಲು, 24 ಗಂಟೆಗಳ ಒಳಗೆ ಸ್ಥಳವನ್ನು ತೆರವುಗೊಳಿಸಬೇಕೆಂದು ತಿಳಿಸಿದರು. ಸುಮಾರು ರಾತ್ರಿ 7.30ರ ವೇಳೆಗೆ ನೋಟೀಸ್ ನೀಡಲು ಪ್ರಾರಂಭಿಸಿ, 28 ಜುಲೈ 2011ರ ಮಧ್ಯರಾತ್ರಿಯವರೆಗೂ ಮುಂದುವರಿಯಿತು. ತಮಗೆ ಮಾತನಾಡಲು ಅವಕಾಶ ನೀಡುವಂತೆ ಕುಟುಂಬಗಳು ಜಿಲ್ಲಾಡಳಿತವನ್ನು ಬೇಡಿಕೊಂಡರೂ, ಅವರಿಗೆ ಯಾವ ರೀತಿಯ ಅವಕಾಶವನ್ನು ನೀಡಲೂ ನಿರಾಕರಿಸಿ, ಈ ವಿಷಯದಲ್ಲಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದೂ, ಅವರ ಮನೆಗಳು ಹಾಗೂ ಅಂಗಡಿ-ಮುಂಗಟ್ಟುಗಳನ್ನು ಕೆಡಹುವ ನಿರ್ಣಯವನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆಯೆಂದು ಹೇಳಿದರು.

ಜುಲೈ 29, 2011ರಂದು ಅಲ್ಲಿ ವಾಸಿಸುವ ಜನರ ಮನೆಗಳು ಹಾಗೂ ಅಂಗಡಿಗಳನ್ನು ಕೆಡಹಲು ಜಿಲ್ಲಾಧಿಕಾರಿಗಳು ಬಂದು, ಕೆಡಹುವಿಕೆಯನ್ನು ಆದೇಶಿಸುವ ಉಚ್ಚ ನ್ಯಾಯಾಲಯದ ಆದೇಶದ ಅಸ್ತಿತ್ವದ ಉದಾಹರಣೆಯನ್ನು/ಕಾರಣವನ್ನು ಬಳಸಿದರು. ಜುಲೈ 29, 2011ರಂದು ಕೆಡಹುವಿಕೆಯು ಪ್ರಾರಂಭವಾಗುವ ಮುನ್ನ, ಹೊಸಪೇಟೆಯ ಎಮ್‌ಎಲ್‌ಎ ಹಾಗೂ ಮಾರುಕಟ್ಟೆಯ ಜನರು ಉಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ಕೇಳಿದಾಗ, ಅದನ್ನು ತೋರಿಸಲಿಲ್ಲ ವಾಸ್ತವದಲ್ಲಿ, ಜುಲೈ 25, 2011ರಂದು ಉಚ್ಚ ನ್ಯಾಯಾಲಯವು ಕೇವಲ ಪರಿಸ್ಥಿತಿ ವರದಿಯನ್ನು ಕೇಳಿತ್ತೆ ಹೊರತು, ಕೆಡಹುವಿಕೆಗೆ ಆದೇಶ ನೀಡಿರಲಿಲ್ಲ. ಪಂಚಾಯತ್ ಸದಸ್ಯರು, ಸ್ಥಳೀಯ ಸಮುದಾಯಗಳು ಹಾಗೂ ಜನಪ್ರತಿನಿಧಿಗಳು ಪ್ರಯತ್ನ ಮಾಡಿದರೂ, ಜಿಲ್ಲಾಧಿಕಾರಿಗಳು ಕೆಡಹುವಿಕೆಯನ್ನು ಮುಂದುವರಿಸಿದರು. ಜಿಲ್ಲಾಡಳಿತವನ್ನು ಜನರು ಪ್ರಶ್ನಿಸಿದಾಗ, ಅವರ ವಿರುದ್ಧ ಕೇಸ್ ದಾಖಲಿಸುವುದಾಗಿಯೂ, ಸೆಕ್ಷನ್ 420 ಅಡಿಯಲ್ಲಿ ಅವರನ್ನು ಬುಕ್" ಮಾಡುವುದಾಗಿಯೂ ಬೆದರಿಸಿದರು. ಭಾರತದ ಸಂವಿಧಾನದಲ್ಲಿ ಖಾತರಿ ಪಡಿಸಿರುವಂತೆ, ತಮ್ಮ ಹಕ್ಕುಗಳನ್ನು ಜನರು ಪ್ರತಿಪಾದಿಸಿದಾಗ, ಅಂತಹವರನ್ನು ಏಕೆ ಬಂಧಿಸಬೇಕು? ಅಷ್ಟೇ ಅಲ್ಲ, ತಮ್ಮ ಮನೆಗಳನ್ನು ಕೆಡಹುತ್ತಿದ್ದ ಜನರು ಮೌನ ಪ್ರತಿಭಟನೆಯನ್ನು ನಡೆಸಿದಾಗ, ಅವರ ಮೇಲೆ ಲಾಠಿ ಪ್ರಹಾರ ಮಾಡಲಾಯಿತು, ಹಾಗೂ ಅವರಲ್ಲಿ ಕೆಲವರನ್ನು ಪೋಲೀಸ್ ವ್ಯಾನ್‌ಗಳಲ್ಲಿ ಬಂಧಿಸಿಯೂ ಇಡಲಾಗಿತ್ತು.

ಈ ಉಚ್ಚಾಟನೆಯ ಪ್ರಭಾವದಿಂದ, ಅನೇಕ ಕುಟುಂಬಗಳು, ಅದರಲ್ಲೂ ಸಣ್ಣ ಮಕ್ಕಳು ಹಾಗೂ ಮುದಕರು ಇರುವ ಕುಟುಂಬಗಳು ಬೀದಿಗೆ ಬಂದಿದ್ದಾರೆ, ವಾಸಿಸಲು ಅವರಿಗೆ ಸ್ಥಳವಿಲ್ಲ ಹಾಗೂ ಇದು ಅವರ ಜೀವನೋಪಾಯಗಳ ಮೇಲೂ ಪ್ರಭಾವ ಬೀರಿದೆ. ಡಬ್ಲ್ಯು.ಪಿ.ಸಂ.29843/2009ರ ವಿಷಯವನ್ನು

ಗಮನಿಸುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯವು ಆದೇಶ ನೀಡಿದ್ದರೂ, ಕುಟುಂಬಗಳಿಗೆ ಅಧಿಕಾರಿಗಳು ಯಾವುದೇ ಪುನರ್ವಸತಿಯನ್ನು ಒದಗಿಸಿಲ್ಲ.

ತಮ್ಮ ಮನೆಗಳು ಹಾಗೂ ಅಂಗಡಿಗಳನ್ನು ಕಳೆದುಕೊಂಡ ಎಲ್ಲ ವ್ಯಕ್ತಿಗಳೂ ಪ್ರಸ್ತುತ ಸ್ಥಳದಲ್ಲೇ ಜೀವಿಸುತ್ತಿದು, ಹಲವಾರು ದಶಕಗಳಿಂದ ತಮ್ಮ ಜೀವನೋಪಾಯಕ್ಕಾಗಿ ಸಣ್ಣ ಅಂಗಡಿಗಳು ಹಾಗೂ ವ್ಯಾಪಾರಗಳನ್ನು ನಡೆಸುತ್ತಿದ್ದಾರೆ. ಗ್ರಾಮ ಪಂಚಾಯತಿಯು ಅವರಿಗೆ ಪಟ್ಟಾಗಳು, ಲೈಸನ್ಸ್/ಪರವಾನಗಿಗಳನ್ನೂ ನೀಡುತ್ತಿದೆ ಹಾಗೂ ನಿಯಮಿತವಾಗಿ ಅವರು ತಮ್ಮ ಕಂದಾಯಗಳನ್ನೂ ಕಟ್ಟುತ್ತಿದ್ದಾರೆ.

**29 ಜುಲೈ 2011ರಂದು ನಡೆದ ಅಕ್ರಮ ಕೆಡಹುವಿಕೆಯ ನಿರ್ದಿಷ್ಟ ವಿಷಯದ ಪರಿಧಿಯ ಆಚೆ, ಪರಂಪರೆಯ ತಾನದ ಸಂರಕ್ಷಣೆಗಾಗಿ ನಡೆಯುವ ಕಾರ್ಯತಂತ್ರ ಹಾಗೂ ಯೋಜನೆಯಲ್ಲಿ ಸೇರ್ಪಡಿಕೆಯ ವಿಸ್ತೃತ ಅಂಶವೆ ಅಡಗಿದೆ. ನಮಗೆ ಎದುರಾಗುತ್ತಿರುವ ಕೆಲವು ಪ್ರಶ್ನೆಗಳು/ಅಂಶಗಳೆಂದರೆ:**

1. 1986ರಲ್ಲಿ ಹಂಪಿಯನ್ನು ಯುನೆಸ್ಕೊ ವಿಶ್ವ ಪರಂಪರೆಯ ತಾಣ ಎಂದು ಘೋಷಿಸುವ ಮುನ್ನ, ಸ್ಥಳೀಯ ಜನರೊಡನೆ ಸಮಾಲೋಚನೆ ನಡೆಸಲಾಯಿತೆ?
2. ಪ್ರಗತಿಪರ ಪಂಚಾಯತ್ ರಾಜ್ ಕಾಯಿದೆ, 1993 ಇರುವಾಗ, ಹಂಪಿ ವಿಶ್ವ ಪರಂಪರಾ ತಾಣ ನಿರ್ವಹಣಾ ಪ್ರಾಧಿಕಾರ ಕಾಯಿದೆ 2002ನ್ನು ರೂಪಿಸುವ ಸಂವೈಧಾನಿಕ ಆಜ್ಞೆ ಯಾವುದು?
3. ಮಾಸ್ಟರ್ ಪ್ಲಾನ್ 2021ನ್ನು ರೂಪಿಸುವಲ್ಲಿ ಅಳವಡಿಸಿರುವ ಸಂಯುಕ್ತ ಪ್ರಕ್ರಿಯೆ ಯಾವುದು?
4. ಭಾರತದ ಬೇರೆ ಯಾವುದೇ ಗ್ರಾಮದ ಜನರಿಗೆ ಇರುವ ಹಕ್ಕುಗಳಂತೆ, ಹಂಪಿಯ ಜನರಿಗೂ ಹಕ್ಕುಗಳಿವೆ ಹಾಗೂ, ಹಂಪಿಗೆ ಇರುವ ಯುನೆಸ್ಕೊ ಪಟ್ಟಿಯು, ಜನರ ಜೀವನಗಳು ಹಾಗೂ ಜೀವನೋಪಾಯಗಳ ಮೇಲೆ ಮೂಲಭೂತವಾದ ಪರಿಣಾಮವನ್ನು ಮಾಡಿದೆ.

ಹಂಪಿಯಲ್ಲಿರುವ ಸಮುದಾಯಗಳೊಡನೆ ಇರುವ ಪ್ರಾರಂಭಿಕ ಚರ್ಚೆಗಳಿಂದ, ಯುನೆಸ್ಕೊ ಸಮ್ಮೇಳನದ ಅಡಿಯಲ್ಲಿ ಹಂಪಿಯನ್ನು ವಿಶ್ವ ಪರಂಪರೆ ಎಂದು ಘೋಷಿಸಿದಾಗಿನಿಂದಲೂ, ಜನರಲ್ಲಿ ಬಹಳಷ್ಟು ಆತಂಕವನ್ನು ಉಂಟುಮಾಡಿದೆ. ಈ ಆತಂಕಗಳನ್ನು ಉದ್ದೇಶಿಸಲು ರಾಜ್ಯ ಸರ್ಕಾರವು ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ. ಬದಲಾಗಿ, ಪ್ರತಿಯೊಂದು ಕರಡು ಮಾಸ್ಟರ್ ಪ್ಲಾನ್ ರೂಪಿಸಿದಾಗಲೂ ಪುನರಾವರ್ತಿತ ಉಚ್ಛಾಟನೆಯ ಬೆದರಿಕೆಗಳು ಹಾಗೂ ಡಬ್ಲ್ಯು.ಪಿ.ಸಂ.29843/2009ರ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಶ್ರೀ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ ಹೂಡಿದ ಕೇಸ್‌ನ ನೆಪವನ್ನು ಬಳಸಲಾಗುತ್ತಿದೆ.

ಹಂಪಿಯು ಕೇವಲ ಚಾರಿತ್ರಿಕ ಪರಂಪರಾ ತಾಣವಲ್ಲ. ಅನೇಕ ಪ್ರವಾಸಿಗರು ಅದರ ಪರಂಪರೆಯ ಸ್ಥಾನಮಾನಕ್ಕಾಗಿ ಹಂಪಿಗೆ ಬಂದರೆ, ಇಲ್ಲಿಗೆ ಬರುವ ಬಹುತೇಕ ಸಂಖ್ಯೆಯ ಜನರು ದೇವಾಲಯದ ಭಕ್ತಾದಿಗಳು ಹಾಗೂ ಸಂಶೋಧನಾಕಾರರು ಆಗಿದ್ದಾರೆ. ಪ್ರವಾಸೋದ್ಯಮದ ಬಹುಮುಖಿ ಪಾತ್ರ ಹಾಗೂ ಈ ಪ್ರದೇಶದಲ್ಲಿ ಅದರ ಆರ್ಥಿಕ ಕೊಡುಗೆಗೆ ಸೂಕ್ತ ಮನ್ನಣೆ ದೊರೆತಿಲ್ಲ.

**ಕೆಳಕಂಡ ನಿರ್ದಿಷ್ಟ ಕಾರಣಗಳಿಗಾಗಿ (ವಿಸ್ತೃತ ಸೂಚನೆಯನ್ನು ಲಗತ್ತಿಸಲಾಗಿದೆ), ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಆಡಳಿತವು ಅಳವಡಿಸಿಕೊಂಡ ವಿಧಾನವನ್ನು ನಾವು ಖಂಡಿಸುತ್ತೇವೆ:**

1. ಮಾನವ ಹಕ್ಕುಗಳ ಉಲ್ಲಂಘನೆ: ಮನೆಗಳು ಹಾಗೂ ಜೀವನೋಪಾಯ

ನೂರಾರು ಜನರು ತಮ್ಮ ಮನೆಗಳು, ಜೀವನೋಪಾಯಗಳು ಅಥವಾ ಎರಡನ್ನೂ ಕಳೆದುಕೊಂಡಿದ್ದಾರೆ. ಅವರ ಬದುಕಿನ ಸ್ಥಿತಿಗತಿಯು ಸೂಕ್ತತೆಗಿಂತ ಮಾರು ದೂರವಿದೆ; ಅನೇಕ ಜನರಿಗೆ ಮೂಲಭೂತ ಅಗತ್ಯಗಳಾದ ಮನೆ, ನೈರ್ಮಲ್ಯ, ವೈದ್ಯಕೀಯ ಸೌಲಭ್ಯಗಳು ಹಾಗೂ ಸ್ವಚ್ಛ ನೀರಿಗೆ ಲಭ್ಯತೆ ಇಲ್ಲ.

ಜೊತೆಗೆ, ಅಂಗಡಿಗಳನ್ನು ಕೆಡುಹಿದ ನಂತರ, ಮುಂದೆ ಅವರನ್ನು ಮನೆಯಿಂದ ಬಲವಂತವಾಗಿ ಹೊರಹಾಕುವ ಬೆದರಿಕೆಯಲ್ಲೇ ಜೀವಿಸುತ್ತಾರೆ. ಉಚ್ಚಾಟನೆಯ ನೋಟೀಸ್‌ನ್ನು ಸಂಜೆಯ ಅಂತ್ಯಕ್ಕೆ ನೀಡಿ, ಮರುದಿನ ಬೆಳಗ್ಗೆಯೇ, ಪೋಲೀಸ್ ಹಾಗೂ ಬುಲ್‌ಡೋಜರ್‌ಗಳ ಸಹಾಯದಿಂದ ಉಚ್ಚಾಟನೆಗಳನ್ನು ಕೈಗೊಂಡು, ತಮ್ಮ ವಸ್ತುಗಳನ್ನು ತೆಗೆದುಕೊಳ್ಳಲು ಬಹಳ ಕಡಿಮೆ ಸಮಯ ಅಥವಾ ಸಮಯವೇ ಇಲ್ಲದಂತೆ ಆಗಿದೆ. ಯಾರಿಗೂ ಅವರ ಮಾತನ್ನು ಹೇಳಲು ಸಮಯವನ್ನು ನೀಡದೆ, ಒಂದೇ ದಿನದಲ್ಲಿ, 40–50 ವರ್ಷಗಳಿಂದ ಇದ್ದ ಅಲ್ಲಿದ್ದ ನಿವಾಸಿಗಳನ್ನು ಸ್ಥಳಾಂತರಗೊಳಿಸಲಾಗಿದೆ. ಜನರನ್ನು ಅಲ್ಲಿಂದ ಬಲವಂತವಾಗಿ ಉಚ್ಚಾಟನೆಗೊಳಿಸಿದ ರೀತಿಯೂ ಸಹ, ಕಾನೂನಿನ ಸ್ಥಾಪಿತ ನೀತಿ–ನಿಯಮಗಳ ಸಂಪೂರ್ಣ ಉಲ್ಲಂಘನೆಯಾಗಿದೆ.

ಬಲವಂತದ ಉಚ್ಚಾಟನೆಗಳು ತೀವ್ರ ರೀತಿಯ ಸಾಮಾಜಿಕ ಅನ್ಯಾಯಗಳು. ಹಂಪಿ ಮಾರುಕಟ್ಟೆಯಿಂದ ಜನರನ್ನು ಉಚ್ಚಾಟನೆ ಮಾಡುವ ವಿಷಯವು 1990ರ ದಶಕದ ಪ್ರಾರಂಭದಿಂದಲೇ ಇದೆಯೆಂದು ಜಿಲ್ಲಾ ಆಡಳಿತವು ಹಂಚಿಕೊಂಡಿದೆ. ಆದರೆ, ಸೈಟು/ಮಾಸ್ಟರ್ ಪ್ಲಾನ್‌ಗಳು ಏನು ಹಾಗೂ ಅದು ಜನರ ಮೇಲೆ ಬೀರಬಹುದಾದ ಪರಿಣಾಮಗಳನ್ನು ಕುರಿತಾಗಿ ಯಾವುದೇ ಸ್ಪಷ್ಟತೆ ಇಲ್ಲ. ಜನರ ವಿವಿಧ ಗುಂಪುಗಳಿಗೆ ಮಾಸ್ಟರ್ ಪ್ಲಾನ್‌ನ ಹಲವಾರು ಕರಡುಗಳನ್ನು ಕಳುಹಿಸಲಾಗಿದೆ, ಆದರೆ, ಅಂತಿಮವಾಗಿ ಮೂಡಿಬಂದ ಮಾಸ್ಟರ್ ಪ್ಲಾನನ್ನು, *ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಾಯಿದೆ 2002*ರ ಪ್ರಕಾರ, 60–ದಿನದ ಅವಧಿಗಾಗಿ ಅದನ್ನು ಸಾರ್ವಜನಿಕವಾಗಿ ಲಭ್ಯಗೊಳಿಸಲಾಗಿಲ್ಲ. ಅಲ್ಲದೆ, ಮಾಸ್ಟರ್ ಪ್ಲಾನ್ 2021ರಲ್ಲೂ ಕೂಡ, ವಲಯೀಕರಣವು ಪೂರ್ವಾನುಸಾರಿಯಾಗಿ ಪರಿಗಣಿಸಲಾಗುವುದಿಲ್ಲ, ಹಾಗೂ ನಿಯಮಗಳು ಜಾರಿಗೆ ಬರುವ ಮುನ್ನ ಸ್ಥಾಪನೆಯಾದ ಭೂ ಹಾಗೂ ಕಟ್ಟಡ ಬಳಕೆಗೆ ನಿಷೇಧವಿಲ್ಲವೆಂದು ಗುರುತಿಸಿದೆ. ವಿನೂತನವಾಗಿ ಉದ್ದೇಶಿಸಲಾದ ಬಳಕೆಗೆ ಇದು ಹೊರತಾಗಿದ್ದರೂ, ಜನರಿಗೆ ಯಾವುದೇ ರೀತಿಯಾದ ಕಷ್ಟಕಾರ್ಪಣ್ಯಗಳು ಆಗದಂತೆ, ಕಾಲಕ್ರಮೇಣ ಅವುಗಳನ್ನು ನಿರ್ಮೂಲನಗೊಳಿಸಬೇಕು (ಮಾಸ್ಟರ್ ಪ್ಲಾನ್‌ನ 72ನೆಯ ಪುಟ). ಬದಲಾಗಿ, ಈ ಸಂದರ್ಭದಲ್ಲಿ, ಜನರಿಗೆ ಅಹವಾಲಿನ ಅವಕಾಶವನ್ನೂ ನೀಡದೆ, ಸದರಿ ಭೂಮಿಯಲ್ಲಿ ಹತ್ತಾರು ವರ್ಷಗಳಿಂದ ವಾಸವಾಗಿದ್ದವರನ್ನು ಉಚ್ಚಾಟನೆಗೊಳಿಸಲಾಗಿದೆ.

ಬಲವಂತದ ಉಚ್ಚಾಟನೆಗಳನ್ನು ಮಾನವ ಹಕ್ಕುಗಳ ಉಲ್ಲಂಘನೆಯೆಂದು ಅಂಗೀಕರಿಸಲಾಗಿದೆ. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ *ವಿಧಿ 25 (1)*, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಅಂತರರಾಷ್ಟ್ರೀಯ ಒಡಂಬಡಿಕೆ (ಐಸಿಇಎಸ್‌ಸಿಆರ್) *ವಿಧಿ 11* ಹಾಗೂ ಮಹಿಳೆಯರ ಮೇಲಿನ ಎಲ್ಲ ರೀತಿಯ ತಾರತಮ್ಯದ ನಿರ್ಮೂಲನದ ಸಮ್ಮೇಳನದ (ಸಿಡಾ) *ವಿಧಿ 14 (2) (ಎಚ್)*ರಲ್ಲಿ, ಸಾರ್ವತ್ರಿಕ ಮಾನವ ಹಕ್ಕುಗಳ ಮಾನದಂಡದಲ್ಲಿ ಟಿಪ್ಪಣಿ ಮಾಡಿರುವಂತೆ, ವಾಸಸ್ಥಾನದ/ಮನೆಯ ಹಕ್ಕು ಹಾಗೂ

ಬಲವಂತದ ಉಚ್ಚಾಟನೆಗಳಿಂದ ವಿಮುಕ್ತಿಯನ್ನು ಒತ್ತಿಹೇಳಲಾಗಿದೆ. ಈ ಅಂತರರಾಷ್ಟ್ರೀಯ ಒಡಂಬಡಿಕೆಗಳು ಹಾಗೂ ಇನ್ನಿತರ ವಿಸ್ತೃತವಾಗಿ ಪಾಲಿಸಲಾಗುವ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಒಡಂಬಡಿಕೆಗಳು ಹಾಗೂ ಘೋಷಣೆಗಳಿಗೆ ಭಾರತವೂ ಸಹಿ ಹಾಕಿ, ಸಮ್ಮತಿಸಿದೆ. ಹಾಗಾಗಿ, ಮೂಲಭೂತ ಹಕ್ಕಾದ ಸೂಕ್ತ ವಾಸಸ್ಥಾನವು ದೊರೆಯದ ಜನರಿಗೆ ಸೂಕ್ತ ಮನೆ/ವಾಸಸ್ಥಾನ, ಸುರಕ್ಷತೆ ಒದಗಿಸುವ ಹೊಣೆಗಾರಿಕೆ ಹಾಗೂ ಜನರಿಗೆ ನೀರು, ನೈರ್ಮಲ್ಯ, ಆರೋಗ್ಯ ಆರೈಕೆ ಹಾಗೂ ಶಿಕ್ಷಣದ ಲಭ್ಯತೆಯನ್ನು ಒದಗಿಸುವುದು ರಾಜ್ಯ/ಸರ್ಕಾರಗಳ ಹೊಣೆಗಾರಿಕೆಯಾಗಿದೆ.

2. ಮೂಲಭೂತ ಹಕ್ಕುಗಳ ಉಲ್ಲಂಘನೆ ಹಾಗೂ ರಾಜ್ಯ ಕಾರ್ಯನೀತಿಯ ನಿರ್ದೇಶನಾತ್ಮಕ ತತ್ವಗಳು

***ಕಾನೂನಿನ ಮುಂದೆ ಸಮಾನತ್ವ:*** ಭಾರತೀಯ ಸಮಾಲೋಚನೆ (???) / ಸಂವಿಧಾನದ ***ವಿಧಿ 14ರ*** ಪ್ರಕಾರ, ಭಾರತೀಯ ಭೂಪ್ರದೇಶದ ಒಳಗೆ, ರಾಜ್ಯವು/ಸರ್ಕಾರವು ಕಾನೂನಿನ ಮುಂದೆ ಯಾವುದೇ ವ್ಯಕ್ತಿಯ ಸಮಾನತ್ವವನ್ನು ಅಥವಾ ಕಾನೂನುಗಳ ಸಮಾನ ರಕ್ಷಣೆಯ ನಿರಾಕರಣೆ ಮಾಡುವುದಿಲ್ಲ. ಜನರಿಗೆ ಶಾಂತಿ, ನ್ಯಾಯಯುತತೆ ಹಾಗೂ ಸಮಾನತ್ವವನ್ನು ಒದಗಿಸುವುದು ರಾಜ್ಯದ/ಸರ್ಕಾರದ ಹೊಣೆಗಾರಿಕೆಯಾಗಿದೆ. ಸೂಕ್ತ ಹಾಗೂ ಸಮಂಜಸ್ಸ ಮಾಹಿತಿ, ನಿಯೋಜಿತ ಪ್ರಕ್ರಿಯೆಗಳ ಪರಿಪಾಲನೆ, ಸೂಕ್ತ ಪರಭಾರ ಹಾಗೂ ಪ್ರಭಾವಿತಗೊಂಡ ಕುಟುಂಬಗಳಿಗೆ ಬದಲಿ ಮನೆಗಳನ್ನು ನೀಡದೆ, ತನ್ನ ಜನರ ಉಚ್ಚಾಟನೆಯನ್ನು ಮಾಡುವುದು, ಅವರ ಮೂಲಭೂತ ಹಕ್ಕುಗಳನ್ನು ನಿರಾಕರಿಸಿದಂತೆ. ಜನರಿಗೆ ಯಾವುದೇ ರೀತಿಯ ರಕ್ಷಣೆಯನ್ನು ಒದಗಿಸಲಿಲ್ಲ, ಅಷ್ಟೇ ಅಲ್ಲ, ಜನರ ಮನೆಗಳನ್ನು ಕೆಡವಿ, ನಾಶ ಮಾಡುತ್ತಿದ್ದಾಗ, ಪೋಲೀಸರು ಅಲ್ಲೇ ಇದ್ದರು.

ಜೀವನ ಹಾಗೂ ವೈಯಕ್ತಿಕ ಸ್ವಾತಂತ್ರದ ರಕ್ಷಣೆ: ಭಾರತೀಯ ಸಮಾಲೋಚನೆ (???) / ಸಂವಿಧಾನದ ***ವಿಧಿ 21ರ*** ಪ್ರಕಾರ, ಎಲ್ಲ ಜನರಿಗೂ ಮಾನವ ಗಾಂಭೀರ್ಯತೆಯೊಂದಿಗೆ ಜೀವಿಸುವ ಹಕ್ಕು ಹಾಗೂ ಅದರೊಂದಿಗೆ ಬರುವ ಎಲ್ಲ ವಿಷಯಗಳೂ ಸೇರಿದಂತೆ, ಅಂದರೆ ಜೀವನದ ಅತ್ಯಾವಶ್ಯಕತೆಗಳಾದ ಸೂಕ್ತ ಪೌಷ್ಟಿಕ ಆಹಾರ, ಬಟ್ಟೆ ಹಾಗೂ ತಲೆಯ ಮೇಲೊಂದು ಸೂರು ಹಾಗೂ, ವಿವಿಧ ರೀತಿಗಳಲ್ಲಿ ಓದಲು, ಬರೆಯಲು ಹಾಗೂ ಅಭಿವ್ಯಕ್ತ ಪಡಿಸಿಕೊಳ್ಳಲು ಸೌಕರ್ಯಗಳಾದ್ ಜೀವನದ ಹಕ್ಕನ್ನು ನೀಡುತ್ತದೆ. ಈ ಹಕ್ಕಿನ ಒಂದು ಪ್ರಮುಖ ಭಾಗವೆಂದರೆ ಜೀವನೋಪಾಯದ ಹಕ್ಕಾಗಿದೆ. ಹಂಪಿಯ ಜನರಿಗೆ ಕೇವಲ ತಮ್ಮ ವಾಸದ ಮನೆಗಳಿಂದ ವಂಚಿತಗೊಳಿಸಲಾಗಿಲ್ಲ, ಜೊತೆಗೆ ಅವರ ಅಂಗಡಿ–ಮುಂಗಟ್ಟುಗಳನ್ನು ನಾಶ ಮಾಡುವ ಮೂಲಕ, ಜೀವನೋಪಾಯವನ್ನು ಗಳಿಸುವ ಅವರ ಮೂಲಭೂತ ಹಕ್ಕನ್ನೂ ಕಸಿದುಕೊಳ್ಳಲಾಗಿದೆ. ಈಗ, ಅಲ್ಲಿನ ಕುಟುಂಬಗಳಿಗೆ ವಾಸಕ್ಕೆ ಮನೆಯೂ ಇಲ್ಲ, ಜೀವನೋಪಾಯದ ಮಾರ್ಗವೂ ಇಲ್ಲ.

ವಿಧಿ 21ರ ಅಡಿಯಲ್ಲಿ ಖಾತರಿಯಾದ ಗೌರವಯುತ ಬದುಕಿನ ಸಂವೈಧಾನಿಕವಾಗಿ ರಕ್ಷಿತವಾದ ಹಕ್ಕು, ವಿಧಿ 19(1)(g)ರ ಅಡಿಯಲ್ಲಿ ವ್ಯಾಪಾರ ಹಾಗೂ ವಹಿವಾಟನ್ನು ಕೈಗೊಳ್ಳುವ ಹಕ್ಕು ಹಾಗೂ ವಿಧಿ 14ರಲ್ಲಿ ಖಾತರಿಯಾದ ಸಮಾನತ್ವದ ಹಕ್ಕನ್ನು, ಜಿಲ್ಲಾ ಆಡಳಿತದ ಕಾರ್ಯಾಚರಣೆಯನ್ನು ತೀವ್ರರೀತಿಯಲ್ಲಿ ಉಲ್ಲಂಘನೆ ಮಾಡಲಾಗಿದೆ.

3. ನೈಸರ್ಗಿಕ ನ್ಯಾಯದ ತತ್ವಗಳ ಉಲ್ಲಂಘನೆ

ಪರಮೋಚ್ಚ ನ್ಯಾಯಾಲಯದ ಪ್ರಕಾರ "…..ಆಲಿಕೆ ಇಲ್ಲದೆ ಜನರನ್ನು ಖಂಡಿಸುವುದು, ಅವರ ಬೆನ್ನ ಹಿಂದೆ ಯಾವುದೇ ನಿರ್ಣಯಗಳನ್ನು ಕೈಗೊಳ್ಳುವುದು, ಅವರ ಅನುಪಸ್ಥಿತಿಯಲ್ಲಿ ತಮ್ಮ ಜೀವನಗಳು ಹಾಗೂ ಆಸ್ತಿಯ ಮೇಲೆ ಪ್ರಭಾವ ಬೀರುವ ಯಾವುದೇ ಕ್ರಮವನ್ನು ಮುಂದುವರಿಸುವುದು ಹಾಗೂ ಅವುಗಳಲ್ಲಿ ಭಾಗವಹಿಸದಂತೆ ತಡೆಯುವುದನ್ನು ಮಾಡಬಾರದೆಂಬ ನೈಸರ್ಗಿಕ ನ್ಯಾಯದ ತತ್ವದ ಮೇಲೆ ನಮ್ಮ ಕಾನೂನು ಕ್ರಮಗಳು ಅವಲಂಬಿತವಾಗಿವೆ".

ಸದರಿ ವಿಷಯದಲ್ಲಿ ನಡೆದಂತೆ, ಅಂತಿಮವಾಗಿ ಉಚ್ಚಾಟನೆಯಲ್ಲಿ ಕೊನೆಗೊಂಡ ವಾಸ್ತವಗಳು ಹಾಗೂ ಪರಿಸ್ಥಿತಿಗಳಿಂದ, ನೈಸರ್ಗಿಕ ನ್ಯಾಯಾದ ತತ್ವಗಳ ಉಲ್ಲಂಘನೆ ಆಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ತಮ್ಮ ಮನೆಗಳನ್ನು ತೆರವು ಮಾಡಲು ಕುಟುಂಬಗಳಿಗೆ ವಾಸ್ತವವಾಗಿ ನಡೆದ ಉಚ್ಚಾಟನೆಗಿಂತ ಕೆಲವೇ ಗಂಟೆಗಳ ಮುನ್ನ ನೀಡಲಾಗಿದ್ದು, ಅವರಿಗೆ ಯಾವುದೇ ರೀತಿಯ ಅವಕಾಶವನ್ನು ನೀಡಲಾಗಲಿಲ್ಲ. ಅಷ್ಟೇ ಅಲ್ಲ, ಅವರಿಗೆ ಮಾತನಾಡುವ ಅವಕಾಶವನ್ನು ನೀಡುವಂತೆ ಕೇಳಿದಾಗ, ಅವರನ್ನು ತೆರವುಗೊಳಿಸುವ ನಿರ್ಣಯವನ್ನು ಈಗಾಗಲೇ ತೆಗೆದುಕೊಂಡು ಆಗಿದೆ ಎಂದು ಅವರಿಗೆ ತಿಳಿಸಲಾಯಿತು.

ಹಂಪಿ ಮಾರುಕಟ್ಟೆಯ ನಿವಾಸಿಗಳು ಅನುಭವಿಸಿದ ಪರಿಣಾಮಗಳು ಆಘಾತಕಾರಿಯಾಗಿದೆ. ಬಲವಂತವಾಗಿ ಉಚ್ಚಾಟನೆ ಮಾಡಲಾದ ಕುಟುಂಬಗಳು ಎದುರಿಸುತ್ತಿರುವ ಸವಾಲುಗಳು ಎಣಿಕೆಗೆ ಬಾರದಷ್ಟು. ಅವರು ಬೇರೆಲ್ಲೂ ಹೋಗಲು ಸುರಕ್ಷಿತವಾದ ಹಾಗೂ ಸಧ್ಯದ ಪರಿಸ್ಥಿತಿಗಳಿಗಿಂತ ಸುಧಾರಿತವಾದ ಸ್ಥಳ ದೊರೆಯದೆ, ಕಲುಷಿತ ನೀರಿನಿಂದ ಆವೃತವಾದ ಪಕ್ಕದ ಪ್ರದೇಶಗಳಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದಾರೆ. ಈ ವಿಷಯದಲ್ಲಿ, ಜನರಿಗೆ ಅಹವಾಲಿನ ಹಕ್ಕನ್ನು ನಿರಾಕರಿಸುವ ಮೂಲಕ, ನೈಸರ್ಗಿಕ ನ್ಯಾಯದ ತತ್ವಗಳ ಸ್ಪಷ್ಟವಾದ ಉಲ್ಲಂಘನೆಯನ್ನು ಮಾಡಿದ್ದಾರೆ.

4. ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡದಿರುವಿಕೆ

ಜನ ಪ್ರತಿನಿಧಿ ಹಾಗೂ ಅಲ್ಲಿ ವಾಸಿಸುವ ಜನರಿಗೆ, ಡಬ್ಲ್ಯು.ಪಿ.ಸಂ.29843/2009, ದಿನಾಂಕ 25.7.2011ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ಮೂಲಕ ಬಂದ ಒತ್ತಡದ ಕಾರಣದಿಂದ, ಮನೆಗಳನ್ನು ಹಾಗೂ ಅಂಗಡಿ–ಮುಂಗಟ್ಟುಗಳನ್ನು ಕೆಡವಲಾಯಿತು ಎಂಬ ಸುಳ್ಳು ಮಾಹಿತಿಯನ್ನು ಜಿಲ್ಲಾ ಆಡಳಿತವು ನೀಡಿತು. ಆದರೆ, ನ್ಯಾಯಾಲಯವು ಕೆಡಹುವಿಕೆಗೆ ಆದೇಶವನ್ನು ನೀಡಿಲ್ಲ. "ಮುಂದಿನ ದಿನಾಂಕದ ವಿಚಾರಣೆಗೆ ಮುನ್ನ, ಡಬ್ಲ್ಯು.ಪಿ.ಸಂ.29843/2009ರ ಪ್ರತಿವಾದಿಗಳು ಪ್ರತಿ – ಅಫಿಡವಿಟ್‌ನ್ನು/ ಆಕ್ಷೇಪಣೆಯ ವ್ಯಾಖ್ಯಾನವನ್ನು ಹೂಡಬೇಕು, ಇಲ್ಲವಾದಲ್ಲಿ, ವ್ಯತಿರಿಕ್ತ ಅರ್ಥವನ್ನು ಇದರಿಂದ ಪಡೆಯುವ ಸಂಭವ ಇದೆ" ಎಂದು ಮಾತ್ರ ಆದೇಶದಲ್ಲಿ ಹೇಳಲಾಗಿದೆ. ಜನರಿಗೆ ತಪ್ಪು ಮಾರ್ಗದರ್ಶನ ನೀಡಿ, ಅವರ ಅಹವಾಲನ್ನು ಹೇಳುವ ಅವಕಾಶವನ್ನು ನೀಡಲಿಲ್ಲ.

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿರುವಾಗ ಹಾಗೂ ಜನರ ಪುನರ್ವಸತಿಯ ವಿಷಯದತ್ತ ರಾಜ್ಯ ಸರ್ಕಾರವು ಗಮನವನ್ನು ಹರಿಸಿದಾಗ, ಜಿಲ್ಲಾ ಆಡಳಿತವು ಕಟ್ಟಡಗಳನ್ನು ಕೆಡವಿರುವುದು ಸೂಕ್ತವಲ್ಲದ ಕಾರ್ಯಾಚರಣೆಯಾಗಿದೆ. ಕಮೀಷನರ್, ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ ಇವರು ರಾಜ್ಯ ಸರ್ಕಾರಕ್ಕೆ ಪುನರ್ವಸತಿಯ ಯೋಜನೆಯನ್ನು ಸಲ್ಲಿಸಿದ್ದಾರೆ. ಜನರಿಗೆ ಸೂಕ್ತ ಸೌಕರ್ಯಗಳನ್ನು ಒದಗಿಸು, ಅವರಿಗೆ ಪುನರ್ವಸತಿ ಕಲ್ಪಿಸುವ ಹೊಣೆಗಾರಿಕೆಯು ರಾಜ್ಯ ಸರ್ಕಾರದ್ದಾಗಿತ್ತು.

ಸದರಿ ಸ್ಥಳದಲ್ಲಿ ಹತ್ತಾರು ವರ್ಷಗಳಿಂದ ವಾಸಿಸುತ್ತಿದ್ದ ಕುಟುಂಬಗಳ ಮನೆಗಳನ್ನು ಕೆಡವಿ, ಸಾರ್ವಜನಿಕರಲ್ಲಿ ಅಪಪ್ರಚಾರ ಮಾಡುವಲ್ಲಿ ಸಕ್ರಿಯ ಕ್ರಮಗಳನ್ನು ತೆಗೆದುಕೊಂಡ ಜಿಲ್ಲೆಯ ಉಸ್ತುವಾರಿಯನ್ನು ವಹಿಸಿದ ಸಾರ್ವ್ಜನಿಕ ಅಧಿಕಾರಿಗಳ ನಡುವಳಿಕೆಯು ಅತ್ಯಂತ ಅಸೂಕ್ತವಾದುದು.

**5. ಪಂಚಾಯತ್‌ಗಳ ಅಧಿಕಾರಗಳ ಉಲ್ಲಂಘನೆ**

ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಾಯಿದೆ (ಎಚ್‌ಡಬ್ಲ್ಯುಎಚ್‌ಎಎಮ್‌ಎ) 2002 ರ ಪ್ರಕಾರ, ಪರಂಪರಾ ಪ್ರದೇಶದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುವ ಅಧಿಕಾರವನ್ನು ಇದು ಹೊಂದಿದೆ. ಆದರೆ, ಕಾಯಿದೆಯಲ್ಲಿ, ಸಂಬಂಧಿಸಿದ ಹೊಣೆಗಾರಿಕೆಗಳನ್ನು ಕುರಿತಾಗಿ ಸ್ಪಷ್ಟ ರೂಪರೇಷೆಗಳನ್ನು ನೀಡಲಾಗಿಲ್ಲ, ಹಾಗೂ ಕಾಯಿದೆಯು ಜಾರಿಗೆ ಬಂದ 9 ವರ್ಷಗಳ ನಂತರವೂ ಇದನ್ನು ಕುರಿತಾದ ನಿಯಮಗಳನ್ನು ರೂಪಿಸಲಾಗಿಲ್ಲ. ಕಾಯಿದೆಯ ಪ್ರಕಾರ, ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಎಲ್ಲ ಯೋಜನಾ ಅಂಶಗಳನ್ನು ಕುರಿತಾಗಿ ಪ್ರಾಧಿಕಾರಕ್ಕೆ ಉಳಿದೆಲ್ಲ ಪರಿಗಣನೆಗಳನ್ನು ಮೀರಿಸುವ ಅಧಿಕಾರವಿದೆ. ಪರಂಪರೆಯ ಸಂರಕ್ಷಣೆಯತ್ತ ಕೇಂದ್ರೀಕೃತವಾದ ನಿರ್ವಹಣಾ ಪ್ರಾಧಿಕಾರವು ಸ್ಥಳೀಯ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸುವುದು ಅಸಮಂಜಸವಾದುದು ಹಾಗೂ ಸಾಧ್ಯವಿಲ್ಲ. ಪ್ರತಿನಿಧಿತ್ವದ ಇಲ್ಲದಿರುವಿಕೆ ಹಾಗೂ ಸ್ಥಳೀಯ ಅಭಿವೃದ್ಧಿ ಕ್ರಮಗಳನ್ನು ರೂಪಿಸಿ ಹಾಗೂ ನಿರ್ಧರಿಸುವಲ್ಲಿ ಪಂಚಾಯತಿಗಳ ಪಾತ್ರವನ್ನು ಪರಿಣಾಮಕಾರಿಯಾಗಿ ರದ್ದುಗೊಳಿಸಿದೆ. ಇದು ಗಂಭೀರ ಕಳಕಳಿಯನ್ನು ಮೂಡಿಸುವ ವಿಷಯ, ಏಕೆಂದರೆ ಸಂವಿಧಾನದ 73ನೆಯ ತಿದ್ದುಪಡಿಯ ಅಡಿಯಲ್ಲಿ ಪಂಚಾಯತಿಗಳಿಗೆ ನೀಡಲಾದ ಸಂವೈಧಾನಿಕ ಅಧಿಕಾರವನ್ನು ಅದು ತೆಗೆದುಹಾಕುತ್ತದೆ.

6. ಪ್ರಜಾಪ್ರಭುತ್ವಾತ್ಮಕ ಪ್ರಕ್ರಿಯೆಗಳ ಉಲ್ಲಂಘನೆ

ಹಂಪಿಯಲ್ಲಿ, ಯೋಜನಾ ಪ್ರಕ್ರಿಯೆಯಲ್ಲಾಗಲಿ ಅಥವಾ ಅನುಷ್ಠಾನದಲ್ಲಾಗಲಿ, ಯಾವುದೇ ಸ್ಥಳೀಯ ಭಾಗವಹಿಸುವಿಕೆ ಅಥವಾ ಸಾರ್ವಜನಿಕ ಸಮಾಲೋಚನೆಗಳು ನಡೆದಿಲ್ಲ. ಜನರನ್ನು ತೊಡಗಿಸಿಕೊಳ್ಳದೆ ಹಂಪಿಗಾಗಿ ಮಾಸ್ಟರ್ ಪ್ಲಾನ್ – 2021ನ್ನು ಅಂತಿಮಗೊಳಿಸಲಾಗಿದೆ. ಚರಿತ್ರೆ, ಪುರಾತತ್ವಶಾಸ್ತ್ರ, ಕಟ್ಟಡ ನಿರ್ಮಾಣ ಕಲೆ, ಪರಿಸರ ಹಾಗೂ ಸಂಸ್ಕೃತಿಯನ್ನು ಗುರುತಿಸುವುದು ಮುಖ್ಯವೇ ಆದರೂ, ಯೋಜನೆ ಹಾಗೂ ನಿರ್ಣಯ ಕೈಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಸ್ಥಳೀಯ ಸಮುದಾಯಗಳ ತೊಡಗಿಸಿಕೊಳ್ಳುವಿಕೆಯನ್ನು ನಿರಾಕರಿಸಿ, ಅದನ್ನು ಮಾಡಲಾಗದು.

7. ಸಂಯುಕ್ತ ರಾಷ್ಟ್ರಗಳ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯ (ಯುನೆಸ್ಕೊ) ಪಾತ್ರ.

ಯುನೆಸ್ಕೊ ಪ್ರತಿನಿಧಿಗಳೊಡನೆ ಈಕ್ವೇಷನ್ಸ್ ನಡೆಸಿದ ಸಭೆಯಲ್ಲಿ, ಯುನೆಸ್ಕೊ ವಿಶ್ವ ಪರಂಪರಾ ಪ್ರದೇಶವೆಂದು ಘೋಷಿಸಿದ ನಂತರ, ಅದರ ಪರಿಣಾಮಗಳ ಕಾನೂನು ಹಾಗೂ ನೀತಿಗಳ ಬಾಧ್ಯತೆಗೆ ಯುನೆಸ್ಕೊವನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದರು. ಪ್ರದೇಶವೊಂದನ್ನು ವಿಶ್ವ ಪರಂಪರೆಯ ತಾಣವೆಂದು ಘೋಷಿಸುವ ಆಶಯವನ್ನು ದೇಶವೊಂದು ಪ್ರಕಟಿಸಿದ ನಂತರ, ಅದು ಮಾಸ್ಟರ್ ಪ್ಲಾನ್‌ನ್ನು ಅಗತ್ಯವಾಗಿ ಸಲ್ಲಿಸಬೇಕು. ಈ ಯೋಜನೆಯ ಅನುಷ್ಠಾನದ ಹೊಣೆಗಾರಿಕೆಯನ್ನು ಹೊರುವ ಸೂಕ್ತ ಸಂಸ್ಥೆಯನ್ನು ಸ್ಥಾಪಿಸುವ ಕಾರ್ಯವನ್ನೂ ಮಾಡಬೇಕು.

ಈ ವಿಷಯದಲ್ಲಿ, ಜುಲೈ 29 2011ರಂದು ಕೆಡುಹುವಿಕೆಯನ್ನು ನಡೆಸಿದ ರೀತಿಯನ್ನು ಕುರಿತಾಗಿ ತಮ್ಮ ಅಳಕುಗಳನ್ನು ರಾಜ್ಯ ಸರ್ಕಾರಕ್ಕೆ ಯುನೆಸ್ಕೊ ತಿಳಿಸಿರುವುದಾಗಿ ನಮಗೆ ಯುನೆಸ್ಕೊದ ಸಿಬ್ಬಂದಿಯು ತಿಳಿಸಿದರು.

**ಕೆಳಕಂಡ ಅಂಶಗಳನ್ನು ಉದ್ದೇಶಿಸಲು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಪಡಿಸುತ್ತೇವೆ:**

1. ಕೆಡಹುವಿಕೆ ಹಾಗೂ ಅದರ ನಂತರ ನಡೆದ ಸರಣಿ ಘಟನೆಗಳನ್ನು ಕುರಿತಾಗಿ ವಿಚಾರಣಾ ಆಯೋಗದ ಸ್ಥಾಪನೆ, ಹಾಗೂ ವಿಶೇಷವಾಗಿ ಸರ್ಕಾರಿ ಅಧಿಕಾರಿಗಳ ಅಧಿಕಾರ ದುರುಪಯೋಗ ಹಾಗೂ ದುರ್ಬಳಕೆ ಅಥವಾ ನಿಂದನೆಯ ಘಟನೆಗಳ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಿಕೆ
2. ಸಾರ್ವಜನಿಕರಿಗೆ ಸುಳ್ಳು ಮಾಹಿತಿಯನ್ನು ನೀಡಿದುದಕ್ಕಾಗಿ ಜಿಲ್ಲಾ ಆಡಳಿತವನ್ನು ಹೊಣೆಗಾರರನ್ನಾಗಿ ಮಾಡುವುದು
3. ಉಚ್ಚಾಟನೆಗೊಂಡ ಕುಟುಂಬಗಳನ್ನು, ಅವರ ಜೀವನೋಪಾಯ ಆಯ್ಕೆಗಳ ಮೇಲೆ ವ್ಯತಿರಿಕ್ತ ಪ್ರಭಾವ ಬೀರದ ಸೂಕ್ತವಾದ ಸ್ಥಳದಲ್ಲಿ ಸೂಕ್ತ ಪುನರ್ವಸತಿಯನ್ನು ಒದಗಿಸುವುದು ಅಥವಾ ಅವರು ವಾಸಿಸುತ್ತಿದ್ದ/ತಮ್ಮ ವ್ಯಾಪಾರಕ್ಕಾಗಿ ಬಳಸುತ್ತಿದ್ದ ಆಸ್ತಿಗಳನ್ನು ಅವರಿಗೆ ಪುನಃ ನೀಡುವುದು
4. ತಮ್ಮ ಜೀವನ, ಹಾಗೂ ಆಸ್ತಿಗಳಿಗೆ ಉಂಟಾದ ಗಂಭೀರ ಹಾನಿ ಹಾಗೂ ಕಳವಿಗಾಗಿ ಕುಟುಂಬಗಳಿಗೆ ಮರುಪೂರಣ ಮಾಡುವುದು
5. ಹಂಪಿಯ ಜನತಾ ಪ್ಲಾಟ್‌ನ ಆಸ್ತಿಗಳ ಕೆಡಹುವಿಕೆಯ ಸಂಭವನೀಯ ಬೆದರಿಕೆಯೂ ಸೇರಿದಂತೆ, ಸಾಮಾನ್ಯ ಜನರಿಗೆ ಉಂಟಾದ ಎಲ್ಲ ಬೆದರಿಕೆಗಳನ್ನೂ ಹಿಂಪಡೆಯುವುದು
6. ಹಂಪಿ ಪರಂಪರಾ ತಾಣ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಾಯಿದೆ 2002ರ ಸೃಷ್ಟಿಯ ಸಂವೈಧಾನಿಕ ಆಜ್ಞೆಯ ಮರುಪರಿಶೀಲನೆ ಹಾಗೂ, ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993ರ ಪ್ರಕಾರ, ಸ್ಥಳೀಯ ಆಡಳಿತ ಹಕ್ಕುಗಳ ಕಸಿದುಕೊಳ್ಳುವಿಕೆಗೆ ಪ್ರತಿಯಾಗಿ, ಅದರ ಪಾತ್ರ ಹಾಗೆ ಅಧಿಕಾರಗಳ ಪರಿಶೀಲನೆ. ಯೋಜನೆ, ಆಡಳಿತ ಹಾಗೂ ನಿರ್ಣಯ ಕೈಗೊಳ್ಳುವಿಕೆಯ ಸ್ಥಳೀಯ ಸಂವೈಧಾನಿಕ ಅಂಗಗಳು ತಮ್ಮ ಪೂರ್ಣ ಸಂವೈಧಾನಿಕ ಪಾತ್ರವನ್ನು ಮರುಸ್ಥಾಪಿಸುವ ಸಲುವಾಗಿ, ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಾಯಿದೆ 2002ರ ತಿದ್ದುಪಡಿ ಅಥವಾ ರದ್ದುಗೊಳಿಸುವಿಕೆ

7. ಪರಂಪರಾ ತಾಣದ ನಿರ್ವಹಣೆಯಲ್ಲಿ ಒಳಗೊಂಡ ಎಲ್ಲ ಆಸಕ್ತ ಗುಂಪುಗಳ/ಹಿಡುವಳಿದಾರರ ಸ್ಪಷ್ಟ ಪಾತ್ರವನ್ನು ನಿಖರವಾಗಿ ರೂಪಿಸಲು ಸ್ಪಷ್ಟ ಮಾರ್ಗಸೂಚಿಗಳ ನಿರೂಪಣೆ.

**ಯುನೆಸ್ಕೊ ಕೆಳಕಂಡ ವಿಷಯಗಳನ್ನೂ ಉದ್ದೇಶಿಸಬೇಕೆಂದು ನಾವು ಆಗ್ರಹ ಪಡಿಸುತ್ತೇವೆ:**
ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಯುನೆಸ್ಕೊ ಎತ್ತಿಹಿಡಿಯುತ್ತದೆ. ಸಂಬಂಧಪಟು ಹಕ್ಕುಗಳು ಡಿಸೆಂಬರ್ 16 1966ರ ವಿಧಿ 27ರ ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆಗಳಲ್ಲೂ (ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುವ ಹಕ್ಕು) ಹಾಗೂ ವಿಧಿ 19ರಲ್ಲೂ (ಅಭಿಪ್ರಾಯದ ಸ್ವಾತಂತ್ರ್ಯವೂ ಸೇರಿದಂತೆ, ಮಾಹಿತಿಯ ಹಕ್ಕು) ಇದು ಕಾಣಿಸಿಕೊಂಡಿದೆ. ಹಂಪಿಯಲ್ಲಿ ನಡೆದ ಕೆಡಹುವಿಕೆಗಳಲ್ಲಿ, ಇವುಗಳ ಸ್ಪಷ್ಟ ಉಲ್ಲಂಘನೆ ಆಗಿದೆ. ಮಾನವ ಹಾಗೂ ಪ್ರಜಾಪ್ರಭುತ್ವಾತ್ಮಕ ಪ್ರಕ್ರಿಯೆಗಳನ್ನು ಬಲಿಕೊಟ್ಟು, ಕಾನೂನಿನ ಕಾಯಿದೆಗಳನ್ನು ಮನನ ಮಾಡದೆ, ವಿಶ್ವ ಪರಂಪರಾ ಪಟ್ಟಿಗಳನ್ನು ಗಳಿಸಲು ಅಥವಾ ಉಳಿಸಲು ಸಾಧ್ಯವಿಲ್ಲವೆಂದು ಸ್ಥಳೀಯ, ರಾಜ್ಯ ಹಾಗೂ ರಾಷ್ಟ್ರೀಯ ಅಧಿಕಾರಿಗಳಿಗೆ ಮನನ ಮಾಡಲು, ಯುನೆಸ್ಕೊ ಇಂತಹ ಘಟನೆಗಳನ್ನು ಸಕ್ರಿಯವಾಗಿ ಹಾಗೂ ಸಾರ್ವಜನಿಕವಾಗಿ ಖಂಡಿಸಬೇಕು.

**ಈ ವಿಷಯವನ್ನು ಆದಷ್ಟೂ ಬೇಗನೆ ಪರಿಶೀಲಿಸಿ, ಹಂಪಿಯಲ್ಲಿ ಜೀವಿಸುತ್ತಿರುವ ಕುಟುಂಬಗಳಿಗೆ ನ್ಯಾಯ ದೊರಕಿಸಿಕೊಡುವ ಸಲುವಾಗಿ, ಈ ಪತ್ರ ಹಾಗೂ ಚಳುವಳಿಯ ಮೂಲಕ, ಕೆಳಗೆ ಸಹಿ ಹಾಕಿದ ನಾವೆಲ್ಲರೂ, ಕೇಂದ್ರ ಮಂತ್ರಿಗಳು ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳನ್ನು ಆಗ್ರಹ ಪಡಿಸುತ್ತೇವೆ.**

**ಈ ವಿಷಯದಲ್ಲಿ ಅರ್ಥಪೂರ್ಣ ಹಾಗೂ ನಿರ್ದಿಷ್ಟವಾದ ಕ್ರಮವನ್ನು ಕೈಗೊಳ್ಳಲಾಗುವುದೆಂದು ನಿರೀಕ್ಷಿಸುತ್ತೇವೆ.**

**ನಿಮ್ಮ ವಿಶ್ವಾಸಿಗಳಾದ,**

**ಹಂಪಿಯ ಸ್ನೇಹಿತರು**
**ಅಧ್ಯಕ್ಷರು: ಎ. ಗೋವಿಂದ ರಾಜ**

**ಶ್ರೀ ಶಾರದಾ ಮಹಿಳಾ ಕಲ್ಯಾಣ ಸಂಘ, ಹಂಪಿ**
**ಅಧ್ಯಕ್ಷರು: ಸ್ವಾತಿ ಸಿಂಗ್**

**ಶ್ರೀ ಮಹರ್ಷಿ ವಾಲ್ಮೀಕಿ ಸಂಘ, ಹಂಪಿ**
**ಅಧ್ಯಕ್ಷರು: ಕಿರಣ್ ಕುಮಾರ್**

**ಶ್ರೀ ಹಂಪಿ ವಿಜಯನಗರ ಗೈಡ್ಸ್ ಯೂನಿಯನ್, ಹಂಪಿ**
**ಅಧ್ಯಕ್ಷರು: ಎಮ್. ನಾಗರಾಜ**

**ಶ್ರೀ ವಿಜಯನಗರ ಆಟೋಚಾಲಕರ ಸಂಘ, ಹಂಪಿ**

**ಅಧ್ಯಕ್ಷರು: ಶ್ರೀ. ವೀರೇಶ್**

**ನಾಗರಿಕರ ಹಕ್ಕುಗಳು ಹಾಗೂ ರಕ್ಷಣಾ ವೇದಿಕೆ, ಹಂಪಿ**
**ಅಧ್ಯಕ್ಷರು: ಮಂಜುನಾಥ ಗೌಡ**

**ಈಕ್ವೇಷನ್ಸ್, ಬೆಂಗಳೂರು**
**ನಿರ್ದೇಶಕರು: ರೋಸ್‌ಮೇರಿ ವಿಶ್ವನಾಥ್**

ಪ್ರತಿ:

1. ಡಾ|| ಗೌತಮ್ ಸೇನ್‌ಗುಪ್ತಾ, ಡೈರೆಕ್ಟರ್ ಜನರಲ್, ಭಾರತೀಯ ಪುರಾತತ್ವ ಸಮೀಕ್ಷೆ
2. ಶ್ರೀ. ಎಎನ್‌ಪಿ ಸಿನ್ಹಾ, ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ
3. ಶ್ರೀ. ಜವಾಹರ್ ಸಿರ್ಕಾರ್, ಕಾರ್ಯದರ್ಶಿ, ಸಂಸ್ಕೃತಿ ಮಂತ್ರಾಲಯ, ಭಾರತ ಸರ್ಕಾರ
4. ಶ್ರೀ. ರಾಜನ್ ಹಬೀಬ್ ಖ್ವಾಜ, ಕಾರ್ಯದರ್ಶಿ, ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ
5. ಶ್ರೀ.ಬಿ.ಕೆ. ಸಿನ್ಹಾ, ನಿರ್ದೇಶಕರು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ
6. ಶ್ರೀ. ಜಗದೀಶ್ ಶೆಟ್ಟಾರ್, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು, ಕರ್ನಾಟಕ ಸರ್ಕಾರ
7. ಶ್ರೀ ಅಮ್ಲಾನ್ ಆದಿತ್ಯ ಬಿಸ್ವಾಸ್, ಅಧ್ಯಕ್ಷರು, ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ
8. ಶ್ರೀ. ಜಿ.ಎಸ್.ನರಸಿಂಹನ್, ಮೇಲ್ವಿಚಾರಕ ಪುರಾತತ್ವಜ್ಞರು, ಕರ್ನಾಟಕ ಸರ್ಕಾರ
9. ಶ್ರೀ. ಎನ್.ಬಿ.ಡಿ. ಕೆಂಪ್ ಗೌಡ, ಹಿರಿಯ ಸಂರಕ್ಷಣಾ ಸಹಾಯಕರು, ಭಾರತೀಯ ಪುರಾತತ್ವ ಸಮೀಕ್ಷೆ, ಕಮಲಾಪುರ
10. ಶ್ರೀಮತಿ ಮಾರ್ಟೀನ್ ಕ್ರಿಸ್ಟಿನ್, ನಿರ್ದೇಶಕರು ಹಾಗೂ ಯುನೆಸ್ಕೊ ಭಾರತೀಯ ಪ್ರತಿನಿಧಿ, ಯುನೆಸ್ಕೊ

**ನಮ್ಮನ್ನು ಸಂಪರ್ಕಿಸಿ**

ಈಕ್ವೇಷನ್ಸ್, ಸಂ. 415, 2ಸಿ ಕ್ರಾಸ್, 4ನೆಯ ಮುಖ್ಯ ರಸ್ತೆ, ಓಎಮ್‌ಬಿಆರ್ ಬಡಾವಣೆ, ಬಾಣಸವಾಡಿ, ಬೆಂಗಳೂರು 560 043, ಭಾರತ

+91–80–2545–7507/2545–7659

info@equitabletourism.org/ campaigns@equitabletourism.org
www.equitabletourism.org